ತುಂಬ ಮಕ್ಕಳು; ಪ್ರತಿವರ್ಷವೂ ಒಂದೊಂದು ಹೆರಿಗೆ. ನಮ್ಮ ಮನೆಗೆ ಅವನ ಹೆಂಡತಿ ಬಂದಾಗಲೆಲ್ಲ ಹೆರಿಗೆಯ ವಿಷಯವೇ ಪ್ರಧಾನವಾಗಿ ಚರ್ಚೆಯಾಗುತ್ತಿತ್ತು. ಆದರೆ ರೇವತಿಯ ದೃಷ್ಟಿಯಲ್ಲಿ ಅದು ಸುಖೀ ಕುಟುಂಬ. ಇಬ್ಬರೂ ಕಷ್ಟಪಟ್ಟು ದುಡಿಯುತ್ತಾರೆ. ಮಧು ಒಂದು ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದರೆ ಅವನ ಹೆಂಡತಿ ನಾಲ್ಕು ಮನೆಗಳಲ್ಲಿ ಮುಸುರೆಯ ಕೆಲಸ ಮಾಡಿ ಜೀವನ ನಿರ್ವಹಿಸುತ್ತಾಳೆ.

ನನಗೆ ನೆನಪಾಯಿತು ಮಧುನ ಮದುವೆ. ಆಗಿನ್ನೂ ನನ್ನ ಮದುವೆಯಾಗಿರಲಿಲ್ಲ. ಒಂದು ದಿನ ಆಕಸ್ಮಿಕ ಮನೆಯಂಗಳದಲ್ಲಿ ಪ್ರತ್ಯಕ್ಷವಾಗಿ ತಲೆ ಕೆರೆದುಕೊಳ್ಳುತ್ತ 'ನನ್ನ ಮದ್ವೆ ಗೊತ್ತಾತು ಒಡ್ಯಾ' ಎಂದ.

ನನಗನಿಸಿತು ಇವನು ಮದುವೆಯ ಹೇಳಿಕೆಗೆ ಬಂದಿದ್ದಾನೆ. ನಾನು ಹೇಳಿದೆ 'ಕೂತುಕೋ'. ಎಷ್ಟು ಹೇಳಿದರೂ ಅವನು ಕುಳಿತುಕೊಳ್ಳಲಿಲ್ಲ ಆಗ 'ಮನೆಯಲ್ಲಿ ಚಹ ಮಾಡುವವರು ಯಾರೂ ಇಲ್ಲ. ನಾನು ಒಳಗೆ ಹೋಗಿ ಸಕ್ರೆ ತರ್ತೀನಿ. ಇಬ್ಬರೂ ಸಕ್ಕರೆ ತಿಂದು ಬಾಯಿ ಚಪ್ಪರಿಸೋಣ' ಎಂದೆ. 'ನೀನು ಖುಷಿಯ ಸುದ್ದಿ ತಂದಿದ್ದೀ.'

'ಸಕ್ರೆ ತಿನ್ನಲು ಇನ್ನೊಂದು ದಿನ ಬರ್ತೀನಿ; ಇವತ್ತು ಬೇರೆ ಕೆಲಸಕ್ಕಂತ ಬಂದಿದ್ದೆ.'

'ಏನಪ್ಪ ಅದು?'

ಅವನ ಬಾಯಿಂದ ಶಬ್ದಗಳು ಹೊರಬೀಳಲಿಲ್ಲ. ನಗುತ್ತ, ತಲೆಕೆರೆದುಕೊಳ್ಳುತ್ತ ನಿಂತಿದ್ದ.

'ದುಡ್ಡೂ ಗಿಡ್ಡು ಏನಾದರೂ ಬೇಕಾಗಿತ್ತೆ?' ನಾನೇ ಕೇಳಿದೆ.

'ಹೌದು, ಸ್ವಲ್ಪ ಸ್ವಲ್ಪ ಕೊಡ್ತೀನಿ, ಹೆಚ್ಚು ಬೇಡ. ಐದುನೂರಾದರೆ ಸಾಕು. ಹೆಂಡತಿಗೊಂದು ದಾಗಿನೆ ಮಾಡಿಸ್ತೀನಿ.'

ಮಧುನ ಲಗ್ನವಾಗಿ ಹತ್ತು ವರ್ಷ ಕಳೆದಿರಬಹುದು. ಇದುವರೆಗೂ ನಾನು ಕೊಟ್ಟ ದುಡ್ಡಿನಲ್ಲಿ ಐದು ರೂಪಾಯಿ ವಾಪಸ್ ಬರಲಿಲ್ಲ. ಒಂದು ದಿನ ನಾನು ಈ ವಿಷಯ ರೇವತಿಯೊಂದಿಗೆ ಚರ್ಚಿಸಿದೆ. ಅವಳಂದಳು: 'ಇರಲಿ ಬಿಡಿ. ನೀವು ಕೇಳ್‌ಬೇಡಿ. ಪಾಪ ಅವನಿಗೆ ಮನೆ ತುಂಬ ಮಕ್ಕಳಿದ್ದಾರೆ.'

ಆದರೆ ಆ ಐದು ನೂರು ರೂಪಾಯಿ ಅವನು ಮರೆಯಲಿಲ್ಲ. ಪೇಟೆಗೆ ಕಾಡಣಬೆ ಬಂದರೆ ನಮಗೆ ಒಂದು ಪಾಲು ತಂದು ಕೊಡಲು ಮರೆಯುವುದಿಲ್ಲ. ಮಾರುಕಟ್ಟೆಗೆ ಮಾವಿನಮಿಡಿ ಬಂದರೆ ಮೊದಲು ಅವನೇ ತಂದು ಕೊಡುತ್ತಾನೆ. ನಮ್ಮ ಚಿಕ್ಕಪುಟ್ಟ ಕೆಲಸಗಳಿಗೆ ಅವನು ಓಡಿ ಬರುತ್ತಾನೆ. ಅಷ್ಟೊಂದು ಸಲಿಗೆಯಿರುವುದರಿಂದ ನಾನು ಆಫೀಸಿನಿಂದ ಬರಲು ತಡವಾದರೆ ನಾನು ಬರುವವರೆಗೂ ಮಧುನ ಮನೆಗೆ ಕೂಡಲು ಹೇಳಿದ್ದು. ಅವಳು ಅಲ್ಲಿ ನಿಶ್ಚಿಂತೆಯಿಂದ ಕೂಡಬಹುದು.

ಅವಳು ಹತ್ತಿರವಿಲ್ಲದಾಗ ನನಗೆ ಅವಳ ಬಗ್ಗೆ ಕಾಳಜಿಯುಂಟಾಗುತ್ತದೆ. ಪ್ರತಿದಿನ ಆಫೀಸಿನಿಂದ ಹೊರಗೆ ಕಾಲಿಡುವಾಗ ನನಗೆ ರೇವತಿಯ ಚಿಂತೆ ಕಾಡುತ್ತದೆ. ಯೋಚಿಸುತ್ತ ಯೋಚಿಸುತ್ತ ನಾನು ಬಸ್ ನಿಲ್ದಾಣಕ್ಕೆ ಬರುತ್ತೇನೆ. ಇನ್ನು ನನಗೆ ಆರುಗಂಟೆಯ ಎಕ್ಸ್‌ಪ್ರೆಸ್ ಬಸ್ ಸಿಗುತ್ತದೆ. ಇನ್ನೂ ಹತ್ತು ನಿಮಿಷ ಕಾಯಬೇಕು. ಒಂದು ಚಹ ಕುಡಿಯುವಷ್ಟು ಹೊತ್ತು. ಸ್ಟಾಲಿಗೆ ಹೋಗಿ ಚಹ ಕೇಳಿ ನಿಂತೇ ಕುಡಿಯುತ್ತೇನೆ.

ಈ ಮಧ್ಯೆ ಒಂದು ಹೆಣ್ಣು ದನಿ ಕಿವಿಗಪ್ಪಳಿಸುತ್ತದೆ.

'ಒಬ್ನೇ ಕುಡೀತೀಯಾ?'

ಹಿಂತಿರುಗಿ ನೋಡಿದರೆ ಸ್ವಾತಿ ನಿಂತಿದ್ದಾಳೆ.

'ನೀನೇನು ಇಲ್ಲಿ?'

'ಮ್ಯಾಪ್‌ಶೆಗೆ ಹೋಗ್ತಿದ್ದೀನಿ; ನಾವೀಗ ಮ್ಯಾಫ್‌ಶೆಯಲ್ಲಿರ್ತಿವಿ.'